ಮಾಡುವವರೆಗೂ ಒಂದು ಮುಟ್ಟಿದೆ. ವಾರದ ರಜೆಯನ್ನೂ ಶಿಕ್ಷಕರು ತ್ಯಾಗ ಮಾಡುವಂತಾಗಿದೆ.

'ಸಮಾಜ ಕಲ್ಯಾಣ ಇಲಾಖೆಯಿಂದ ನೀಡುವ ಸ್ಕಾಲರ್‌ಷಿಪ್‌ಗಾಗಿ ನಾವೀಗ ಆನ್‌ಲೈನ್ ಮೂಲಕ ವಿದ್ಯಾರ್ಥಿಗಳ ಅರ್ಜಿಗಳನ್ನು ತುಂಬಬೇಕಿದೆ. ಜಾತಿ ಹಾಗೂ ಆದಾಯ ಪ್ರಮಾಣಪತ್ರ ಹೊಂದಿಸಿಕೊಳ್ಳುವುದು, ಆಧಾರ್ ಮಾಹಿತಿ ಪಡೆಯುವುದು, ಬ್ಯಾಂಕ್ ಖಾತೆ ತೆರೆಯುವುದು – ಹೀಗೆ ತೆರಪಿಲ್ಲದಂತೆ ಕೆಲಸಗಳಿವೆ' ಎನ್ನುತ್ತಾರೆ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ವಿ.ಎಂ. ನಾರಾಯಣಸ್ವಾಮಿ.

'ಆನ್‌ಲೈನ್‌ನಲ್ಲಿ ಅರ್ಜಿ ತುಂಬಲು ಸೈಬರ್ ಸೆಂಟರ್ ಹುಡುಕಿಕೊಂಡು ಹೋಗಬೇಕು. ಸರ್ವರ್ ಬಿಜಿಯಾಗಿದ್ದರೆ ದಾಖಲೆಗಳು ಅಪ್‌ಲೋಡ್ ಆಗುವುದಿಲ್ಲ. ಅದಕ್ಕಾಗಿ ಮತ್ತೆ ಕಾಯಬೇಕು. ಅರ್ಜಿಯಲ್ಲಿ ವಿದ್ಯಾರ್ಥಿಗಳ ಪೋಷಕರ ಮೊಬೈಲ್ ಸಂಖ್ಯೆಯನ್ನೇ ನೀಡಬೇಕು. ದೃಢೀಕರಣಕ್ಕಾಗಿ ಅವರಿಂದ 30 ಸೆಕೆಂಡ್‌ಗಳಲ್ಲಿ ಒನ್ ಟೈಮ್ ಪಾಸ್‌ವರ್ಡ್ (ಒಟಿಪಿ) ಪಡೆದು, ಅರ್ಜಿ ಪೂರ್ಣಗೊಳಿಸಬೇಕು. ಈ ಎಲ್ಲ ಪ್ರಕ್ರಿಯೆಯಲ್ಲಿ ಸಮನ್ವಯ ಸಾಧಿಸುವುದು ಎಷ್ಟು ಕಷ್ಟ ಗೊತ್ತಾ' ಎಂದು ಅವರು ಕೇಳುತ್ತಾರೆ. ಆದರೆ ಈ ಕಷ್ಟ ಅಧಿಕಾರಿಗಳಿಗೆ ತಿಳಿಯುವುದು ಹೇಗೆ?

## ಗುಮಾಸ್ತರಾದ ಶಿಕ್ಷಕರು

ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿ ಮಾಡುವ ಹೊಣೆ ನಮ್ಮ ಮೇಲೆ ಬಿದ್ದ ಬಳಿಕ ಶಾಲೆಗಳಲ್ಲಿ ಕಲಿಕೆಯ ವಾತಾವರಣವೇ ಇಲ್ಲವಾಗಿದೆ ಎನ್ನುವುದು ಮಾತಿಗೆ ಸಿಕ್ಕ ಹಲವು ಶಿಕ್ಷಕರ ಅನಿಸಿಕೆ. '10–12 ದಿನಗಳಿಂದ ಕಂಪ್ಯೂಟರ್ ಮುಂದೆ ಕುಳಿತುಕೊಳ್ಳುತ್ತಿರುವ ನಮಗೆ ಬೋಧನೆ ಮಾಡಲು ಪುರುಸೊತ್ತೇ ಇಲ್ಲ' ಎಂದು ಅವರು ಹೇಳುತ್ತಾರೆ. ಹೌದು, ಶಿಕ್ಷಕರನ್ನೆಲ್ಲ ಗುಮಾಸ್ತರಂತೆ ಹೀಗೆ ಅರ್ಜಿ ತುಂಬಿಸಲು ಕಂಪ್ಯೂಟರ್ ಮುಂದೆ ಕೂರಿಸಿಬಿಟ್ಟರೆ ಮಕ್ಕಳಿಗೆ ಪಾಠ ಮಾಡುವವರು ಯಾರು? ಈ ಪ್ರಶ್ನೆಯನ್ನು ಆಡಳಿತದ ಹೊಣೆ ಹೊತ್ತ ಯಾರೂ ಹಾಕಿಕೊಂಡಂತೆಯೇ ಇಲ್ಲ.

'ದಶಕಗಳ ಹಿಂದೆ ಜನಗಣತಿಯ ಹೊಣೆ ನಮ್ಮ ಮೇಲೆ ಬಿದ್ದಾಗ ದೇಶಸೇವೆ ಎಂದು ಸಂತೋಷದಿಂದ ಒಪ್ಪಿಕೊಂಡಿದ್ದೆವು. ಶಾಲೆಯ ಅವಧಿ ಮುಗಿದ ಮೇಲೆ ದಸ್ತಾವೇಜು ಹಿಡಿದುಕೊಂಡು ಮನೆಮನೆಗೂ ಸುತ್ತಿ ಮಾಹಿತಿ ಸಂಗ್ರಹಿಸುತ್ತಿದ್ದೆವು. ದೇಶದ ಮಹತ್ವದ ಯೋಜನೆಯಲ್ಲಿ ಪಾಲ್ಗೊಂಡ ಖುಷಿ ಕೂಡ ನಮಗಿತ್ತು. ಆದರೆ, ನಂತರದ ಅವಧಿಯಲ್ಲಿ ಎಲ್ಲ ಹೊರೆಗಳನ್ನು ಹೇರುತ್ತಾ, ವೃತ್ತಿಯ ಗಾಂಭೀರ್ಯವನ್ನು ಕಡಿಮೆ ಮಾಡುತ್ತಾ, ಗುಣಾತ್ಮಕ ಶಿಕ್ಷಣಕ್ಕೂ ಏಟು ಕೊಡುತ್ತಾ ಬರಲಾಗಿದೆ' ಎಂದು ವಿಷಾದಿಸುತ್ತಾರೆ ನಿವೃತ್ತ ಮುಖ್ಯೋಪಾಧ್ಯಾಯ ರುದ್ರಪ್ಪ ಮಾಗಳದ.

## ಆಟ, ಊಟ, ಏನೆಲ್ಲ ಕಾಟ...

ಶಾಲೆಗೆ ಹೊಸ ಕಟ್ಟಡ ನಿರ್ಮಿಸುವುದಿದ್ದರೆ ಅದರ ಉಸ್ತುವಾರಿಯನ್ನು ಶಿಕ್ಷಕರೇ ನೋಡಿಕೊಳ್ಳಬೇಕು. ಬಿಸಿಯೂಟ ಯೋಜನೆ ಬಂದಮೇಲೆ ಅಕ್ಷರ ದಾಸೋಹದ ಜೊತೆಗೆ ಅನ್ನ ದಾಸೋಹದ ಹೊಣೆ ಕೂಡ ನಿಭಾಯಿಸಬೇಕು. ಕ್ಷೀರಭಾಗ್ಯದ ಹಾಲನ್ನೂ ಕೊಡಬೇಕು. ಈ ನಡುವೆ ಪ್ರತೀವರ್ಷ ನಡೆಯುವ ಒಂದಿಲ್ಲೊಂದು ಚುನಾವಣೆಗೆ ಮತಗಟ್ಟೆ ಅಧಿಕಾರಿಗಳಾಗಿ ಕಾರ್ಯ ನಿರ್ವಹಿಸಬೇಕು. ಬೋಧಕೇತರ ಕಾರ್ಯಗಳ ಪಟ್ಟಿ ಹೀಗೆ ಬೆಳೆಯುತ್ತಲೇ ಹೋಗುತ್ತದೆ. ಮೊದಲೇ ಶಿಕ್ಷಕರ ಕೊರತೆಯನ್ನು ಅನುಭವಿಸುತ್ತಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳು, ಇದ್ದ ಶಿಕ್ಷಕರೂ ಬೇರೆ ಕಾರ್ಯಗಳಿಗೆ ನಿಯೋಜನೆ ಆಗುತ್ತಿರುವ ಕಾರಣದಿಂದ ಸೊರಗುತ್ತಿವೆ. ಇದರ ನೇರ ಪರಿಣಾಮ ಮಕ್ಕಳ ಮೇಲಾಗುತ್ತಿದೆ.

**ತಜ್ಞರ ಅಭಿಮತ**

## ಶಿಕ್ಷಕರಿಗೆ ಪಾಠ ಮಾಡಲು ಬಿಡಿ



ಶಿಕ್ಷಕರಿಂದ ಪಾಠ ಮಾಡಿಸುವುದೊಂದನ್ನು ಬಿಟ್ಟು ಬೇರೆ ಎಲ್ಲವನ್ನೂ ಮಾಡಿಸಲಾಗುತ್ತಿದೆ. ಸರ್ಕಾರಿ ಶಾಲೆಗಳ ಗುಣಮಟ್ಟ ಕುಸಿಯಲು ಇದೂ ಒಂದು ಪ್ರಮುಖ ಕಾರಣ. ಶಾಲೆಗಳ ಕುರಿತು ಅಷ್ಟೊಂದು ಕಾಳಜಿಯಿಂದ ಮಾತನಾಡುವ ಮುಖ್ಯಮಂತ್ರಿಯವರಾಗಲಿ, ಶಿಕ್ಷಣ ಸಚಿವರಾಗಲಿ ಈ ನಿಟ್ಟಿನಲ್ಲಿ ಏಕೆ ಯೋಚಿಸುತ್ತಿಲ್ಲ?

ಶಿಕ್ಷಕರನ್ನು ಮೊದಲು ಪಾಠ ಮಾಡಲು ಬಿಡಿ. ಈಗಿನ ಸನ್ನಿವೇಶ ನೋಡಿದರೆ ಅವರಿಗೆ 30–40 ನಿಮಿಷ ಕೂಡ ರಚನಾತ್ಮಕವಾಗಿ ಕಳೆಯಲು ಸಾಧ್ಯವಿಲ್ಲದಷ್ಟು ಒತ್ತಡ ಇದೆ. ಬೋಧಕೇತರವಾದ ಕಾರ್ಯಗಳನ್ನು ನಿರ್ವಹಣೆ ಮಾಡಲು ಪ್ರತೀ ಶಾಲೆಗೂ ಸಹಾಯಕರನ್ನು ನೇಮಕ ಮಾಡಬೇಕು. ಶಿಕ್ಷಕರನ್ನೇ ಪೂರ್ಣಪ್ರಮಾಣದಲ್ಲಿ ಭರ್ತಿಮಾಡದ ಸರ್ಕಾರ ಇನ್ನು ಈ ಸಲಹೆಗೆ ಬೆಲೆ ಕೊಟ್ಟೀತೇ?

ಪ್ರತೀ ಊರಿನಲ್ಲಿ ನಿರುದ್ಯೋಗಿಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿದೆ. ಅವರಿಗೆ ಒಂದಿಷ್ಟು ಗೌರವಧನ ಕೊಟ್ಟು, ಅವರಿಂದ ಅರ್ಜಿ ತುಂಬಿಸುವಂತಹ ಕೆಲಸ ಮಾಡಿದರೆ ಶಿಕ್ಷಕರ ಹೊರೆ ಕಡಿಮೆ ಮಾಡಲು ಸಾಧ್ಯ. ಇದಲ್ಲದೆ ಶಿಕ್ಷಣ ಇಲಾಖೆಯಲ್ಲಿ ಬೋಧಕೇತರ ಸಿಬ್ಬಂದಿ ಕೂಡ ದೊಡ್ಡ ಪ್ರಮಾಣದಲ್ಲಿಯೇ ಇದ್ದಾರೆ. ಅವರಿಗೆ ವರ್ಷಪೂರ್ತಿ ಕೈತುಂಬಾ ಕೆಲಸವೇನೂ ಇರುವುದಿಲ್ಲ. ಅವರನ್ನೂ ಇಂತಹ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲು ಸಾಧ್ಯವಿದೆ. ಒಬ್ಬ ಶಿಕ್ಷಕ ವರ್ಷದ 220 ದಿನ, ದಿನದ 7 ಗಂಟೆ 50 ನಿಮಿಷ ಶಾಲೆಯಲ್ಲಿ ರಚನಾತ್ಮಕವಾಗಿ ಕಳೆಯಬೇಕೆನ್ನುವುದು ನಿಯಮ. ಆದಕ್ಕೆ ಅವಕಾಶ ಮಾಡಿಕೊಟ್ಟರೆ ಸಾಕು.

**-ಪಿ.ವಿ. ನಿರಂಜನಾರಾಧ್ಯ, ಶಿಕ್ಷಣ ತಜ್ಞ**

## ನೆರವಿಗೆ ಸ್ವಯಂಸೇವಾ ಸಂಸ್ಥೆಗಳು ಸಿದ್ಧ



ನಮ್ಮ ತಂಡ ಕಳೆದ ವಾರ ಭೇಟಿ ನೀಡಿದ ಎಲ್ಲ ಶಾಲೆಗಳಲ್ಲಿಯೂ ಶಿಕ್ಷಕರ ಅಲಭ್ಯತೆ ದೊಡ್ಡ ಸಮಸ್ಯೆಯಾಗಿತ್ತು. ಒಬ್ಬರು ಮಧ್ಯಾಹ್ನದ ಬಿಸಿಯೂಟ ಮಾಡಿಸಲು ಹೋದರೆ, ಮತ್ತೊಬ್ಬರು ಅರ್ಜಿ ಭರ್ತಿ ಮಾಡಲು ತೆರಳಿದ್ದರು. ವಿಷಯ ಶಿಕ್ಷಕರು ಹೀಗೆ ಅನ್ಯ ಕಾರ್ಯದ ನಿಮಿತ್ತ ತೆರಳಿದರೆ ಮಕ್ಕಳು ಶಾಲೆಯಲ್ಲಿ ಕಲಿಯುವ ದಾರಿ ಯಾವುದು?

ಸರ್ಕಾರಿ ಶಾಲೆಗಳ ಒಳಿತಿಗಾಗಿ ಹಲವು ಸ್ವಯಂಸೇವಾ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಈ ಸಂಸ್ಥೆಗಳೊಟ್ಟಿಗೆ ಸ್ವಯಂಸೇವಕರ ದೊಡ್ಡ ಪಡೆಯೇ ಇದೆ. ಶಾಲೆಗಳಿಗೆ ಬೇಕಾದ ಅಗತ್ಯ ನೆರವು ನೀಡಲು ಈ ಸಂಸ್ಥೆಗಳು ಸಿದ್ಧವಿವೆ. ಶಿಕ್ಷಣ ಇಲಾಖೆ ಅವರ ಸಹಾಯ ಪಡೆದುಕೊಂಡರೆ ಶಿಕ್ಷಕರ ಹೊರೆ ಕಡಿಮೆ ಆಗುವುದಲ್ಲದೆ ಸಮುದಾಯದ ಪಾಲ್ಗೊಳ್ಳುವಿಕೆಗೂ ಅವಕಾಶ ಸಿಕ್ಕಂತಾಗುತ್ತದೆ.

ದುರದೃಷ್ಟವಶಾತ್ ಶಿಕ್ಷಣ ಇಲಾಖೆಯ ಬಳಿ ಯಾವ ಜಿಲ್ಲೆಯಲ್ಲಿ, ಯಾವ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ ಎನ್ನುವ ಮಾಹಿತಿಯೇ ಇಲ್ಲ. ಆನ್‌ಲೈನ್ ಅರ್ಜಿ ಭರ್ತಿಯಂತಹ ಕಾರ್ಯದಲ್ಲಿ ಶಾಲೆಯ ಹಳೆಯ ವಿದ್ಯಾರ್ಥಿಗಳ ನೆರವನ್ನೂ ಪಡೆಯಲು ಸಾಧ್ಯವಿದೆ.

**-ನಾಗಸಿಂಹ ಜಿ. ರಾವ್, ಆರ್‌ಟಿಇ ಕಾರ್ಯಪಡೆ ಸಂಚಾಲಕ**

**ಶಿಕ್ಷಕರನ್ನು ಗುಮಾಸ್ತರಂತೆ ದುಡಿಸಿಕೊಂಡರೆ ಮಕ್ಕಳಿಗೆ ಪಾಠ ಹೇಳುವವರು ಯಾರು? ಇದು ದಶಕಗಳಿಂದ ಬಗೆಹರಿಯದ ಪ್ರಶ್ನೆ.**